# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 724 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 22.07.2024 |
| ಉತ್ತರಿಸುವ ಸಚಿವರು | ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಚಿತ್ರದುರ್ಗ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾಲಯಕ್ಕೆ ರಾಷ್ಟ್ರೀಯ ವೈದ್ಯಕೀಯ ಆಯೋಗದಿಂದ (ಎನ್.ಎಂ.ಸಿ) ಶೋಕಾಸ್ ನೋಟಿಸ್ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಚಿತ್ರದುರ್ಗ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾಲಯದಿಂದ ವಾರ್ಷಿಕ ಘೋಷಣೆಯ ನಮೂನೆಯಲ್ಲಿ ಎನ್ಎಂಸಿಗೆ ನೀಡಿರುವ ಮಾಹಿತಿಯು ನ್ಯೂನತೆಗಳಿಂದ ಕೂಡಿದೆ ಎಂದು ತಿಳಿದು ಬಂದಿದ್ದು ಈ ಬಗ್ಗೆ ಕಾಲೇಜು ಯಾವ ರೀತಿಯ ಉತ್ತರ ನೀಡಿದೆ; ಇದರ ಬಗ್ಗೆ ಸರ್ಕಾರದ ನಿಲುವೇನು ; | ರಾಷ್ಟ್ರೀಯ ವೈದ್ಯಕೀಯ ಆಯೋಗವು ನೀಡಿರುವ ಶೋಕಾಸ್ ನೋಟೀಸ್‌ನಲ್ಲಿ ಈ ಕೆಳಕಂಡ ನ್ಯೂನ್ಯತೆಗಳನ್ನು ಗುರುತಿಸಿರುತ್ತದೆ.<br>1. No Faculty/SR /Tutor, Etc Registered on AEBAS.<br>2. Bed Occupancy Is Inadequate.<br>3. Blood Bank License Is Expired.<br>4. Unrealistic data provided for haematology, clinical pathology, biochemistry and serology investigation as per OPD and IPD data.<br>5. No Histopathology investigation has been conducted by pathology department.<br>6. X-RAY CT SCAN has been conducted and low rate than expected but X-RAY services are much deficient and MRI data is highly unrealistic.<br>7. Faculty Declaration Form Not Provided.<br>ನ್ಯೂನತೆ ಕುರಿತಂತೆ ಸಂಸ್ಥೆಯ ವತಿಯಿಂದ ಉತ್ತರ ಮತ್ತು ತೆಗೆದುಕೊಂಡ ಕ್ರಮಗಳ ವಿವರಣೆಯನ್ನು ಅನುಬಂಧ-1ರಲ್ಲಿ ಒದಗಿಸಿದೆ. |
| ಇ) | ಎನ್ಎಂಸಿಯು ಚಿತ್ರದುರ್ಗ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾಲಯಕ್ಕೆ ಎಂಬಿಬಿಎಸ್ ಸೀಟ್‌ಗಳನ್ನು ಕಡಿಮೆ ಮಾಡುವುದಾಗಿ ತಿಳಿಸಿದ್ದು ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ; | • ಸರ್ಕಾರದ ಆದೇಶ ಸಂಖ್ಯೆ:ಎಂಇಡಿ 372 ಎಂಪಿಎಸ್ 2022, ದಿನಾಂಕ:27.07.2023ರಲ್ಲಿ ವಿವಿಧ ವೃಂದದ 79 ಬೋಧಕ ಹುದ್ದೆಗಳನ್ನು ಸೃಜಿಸಿ ಆದೇಶಿಸಿದೆ.<br>• ಸದರಿ ಹುದ್ದೆಗಳಲ್ಲಿ 53 ಬೋಧಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಹಾಗೂ ಇನ್ನುಳಿದ 26 ಬೋಧಕ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಸರ್ಕಾರದ ಆದೇಶ ಸಂಖ್ಯೆ:ಎಂಇಡಿ 372 |

| | | |
|---|---|---|
| | | ಎಂಪಿಎಸ್ 2022, ದಿನಾಂಕ:15.11.2023ರಲ್ಲಿ ಆದೇಶಿಸಿದೆ.<br>• ಆದರೆ, ಸದರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸಂಸ್ಥೆಯಿಂದ ಹೊರಡಿಸಿರುವ ನೇಮಕಾತಿ ಅಧಿಸೂಚನೆಯಲ್ಲಿ ಪ್ರಾಧ್ಯಾಪಕ ಮತ್ತು ಸಹ ಪ್ರಾಧ್ಯಾಪಕ ಹುದ್ದೆಗಳಿಗೆ ನಿಗದಿಪಡಿಸಿರುವ ವಯೋಮಿತಿ ಕುರಿತು ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು ಇಲ್ಲಿ WP.No.2985/2024 ಮತ್ತು WP.No.6794/2024ರಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿರುತ್ತವೆ. ಅದರಲ್ಲಿ WP.No.2985/2024ರ ಪ್ರಕರಣದಲ್ಲಿ ದಿನಾಂಕ:04.06.2024ರಂದು ಅಂತಿಮ ಆದೇಶವಾಗಿದ್ದು, ಸಂಸ್ಥೆಯ ಹಂತದಲ್ಲಿ ಪರಿಶೀಲನಾ ಹಂತದಲ್ಲಿರುತ್ತದೆ. WP.No.6794/2024ರ ಪ್ರಕರಣವು ಮಾನ್ಯ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.<br>• ಸರ್ಕಾರದ ಪತ್ರ ಸಂಖ್ಯೆ:ಎಂಇಡಿ 447 ಎಂಪಿಎಸ್ 2023, ದಿನಾಂಕ:12.10.2023ರಲ್ಲಿ ಸಂಸ್ಥೆಗೆ ಹುದ್ದೆಗಳ ಸೃಜನೆಯಿಲ್ಲದೇ 03-DEO ಮತ್ತು 12-Group-D ಹುದ್ದೆಗಳು ಸೇರಿ ಒಟ್ಟು 15 ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಅನುಮತಿಸಿದೆ.<br>• ಸರ್ಕಾರದ ಆದೇಶ ಸಂಖ್ಯೆ:ಎಂಇಡಿ 651 ಎಂಪಿಎಸ್ 2023, ದಿನಾಂಕ:11.06.2024ರಲ್ಲಿ ಸಂಸ್ಥೆಯ ಮೊದಲ ವರ್ಷದ ನವೀಕರಣಕ್ಕಾಗಿ ವಿವಿಧ ವಿಭಾಗಗಳಿಗೆ ಸೇರಿ ಒಟ್ಟು 14 ಬೋಧಕ ಹುದ್ದೆಗಳನ್ನು ಸೃಜಿಸಿ ಸದರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಹಾಗೂ 20 ಶುಶ್ರೂಷಕ ಹುದ್ದೆಗಳನ್ನು ಸೃಜಿಸಿ, ಸದರಿ ಹುದ್ದೆಗಳನ್ನು ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಆದೇಶಿಸಿದೆ. |
| ಈ) | ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಗೆ ಕಾಲೇಜು ಕಟ್ಟಡ ಮತ್ತು ವಸತಿ ನಿಲಯಗಳ ವ್ಯವಸ್ಥೆಗಳನ್ನು ಪೂರ್ಣಗೊಳಿಸಲು ಎಷ್ಟು ಅನುದಾನ ನೀಡಲಾಗಿದೆ? (ವಿವರ ನೀಡುವುದು) | ಸದರಿ ಕಾಲೇಜು ಕಟ್ಟಡ ಹಾಗೂ ಮತ್ತಿತರ ಕಟ್ಟಡ ಕಾಮಗಾರಿಗೆ ಈಗಾಗಲೇ ರೂ.60.00 ಕೋಟಿಗಳ ಅನುದಾನ ನೀಡಲಾಗಿದೆ. |

ಸಂಖ್ಯೆ: ಎಂಇಡಿ 343 ಎಂಪಿಎಸ್ 2024

(ಡಾ|| ಶರಣಪ್ರಕಾಶ ಆರ್. ಪಾಟೀಲ್)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

## ಅನುಬಂಧ-1

**ರಾಷ್ಟ್ರೀಯ ವೈದ್ಯಕೀಯ ಆಯೋಗವು ಗುರುತಿಸಿರುವ ನ್ಯೂನತೆ ಕುರಿತಂತೆ ಸಂಸ್ಥೆಯ ವತಿಯಿಂದ ಉತ್ತರ ಮತ್ತು ತೆಗೆದುಕೊಂಡ ಕ್ರಮಗಳ ವಿವರ ಈ ಕೆಳಕಂಡಂತಿದೆ:-**

1. No Faculty/SR /Tutor, Etc Registered on AEBAS: ಚಿತ್ರದುರ್ಗ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಈವರೆಗೂ 2023-24ನೇ ಶೈಕ್ಷಣಿಕ ಸಾಲಿಗೆ 150 ಎಂಬಿಬಿಎಸ್ ವಿದ್ಯಾರ್ಥಿಗಳ ಪ್ರವೇಶಾತಿ ಪಡೆಯಲಾಗಿದೆ. ರಾಷ್ಟ್ರೀಯ ವೈದ್ಯಕೀಯ ಆಯೋಗದನುಸಾರ letter of Permission (LOP) ಅವಶ್ಯಕವಾಗಿದ್ದ ಹುದ್ದೆಗಳಲ್ಲಿ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯ ಕೆಲ ಅರ್ಹ ವೈದ್ಯಾಧಿಕಾರಿಗಳನ್ನು ಗುರುತಿಸಿಕೊಂಡು ಇನ್ನೂ ಉಳಿದ 79 ಹುದ್ದೆಗಳ ಸೃಜನೆ ಮತ್ತು ಭರ್ತಿಗಾಗಿ ಆರ್ಥಿಕ ಇಲಾಖೆಯ ಅನುಮೋದನೆ ಪಡೆಯಲಾಗಿದೆ. ಈ 79 ಹುದ್ದೆಗಳಲ್ಲಿ 03 ಹುದ್ದೆಗಳನ್ನು ವರ್ಗಾವಣೆಯ ಮುಖಾಂತರ ಭರ್ತಿ ಮಾಡಿದ್ದು, ಇನ್ನುಳಿದ ಬೋಧಕ ಹುದ್ದೆಗಳನ್ನು ನಿಯಾಮಾನುಸಾರ ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು ದಿನಾಂಕ: 10.01.2024 ಸಂಸ್ಥೆಯ ವೆಬ್ ಸೈಟ್ ಮತ್ತು ಸಾರ್ವಜನಿಕ ಪತ್ರಿಕೆಗಳ ಮುಖಾಂತರ ಪ್ರಕಟಿಸಲಾಗಿದೆ.

   ಮುಂದುವರೆದು, ಸಹ ಪ್ರಾಧ್ಯಾಪಕರ ವಯೋಮಿತಿಯನ್ನು ಹೆಚ್ಚಿಸಲು ಕೋರಿ ಅಭ್ಯರ್ಥಿಯೊಬ್ಬರು ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:2985/2024ನ್ನು ಸಲ್ಲಿಸಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ರಿಟ್ ಅರ್ಜಿಯನ್ನು ವಜಾಗೊಳಿಸಲು ಸರ್ಕಾರದ ಅಡ್ವೋಕೇಟ್ ಜನರಲ್‌ರವರು ಉಚ್ಚ ನ್ಯಾಯಲಯದಲ್ಲಿ ಕೋರಿರುತ್ತಾರೆ. ಮಾನ್ಯ ನ್ಯಾಯಾಲಯದಿಂದ ಅಂತಿಮ ತೀರ್ಪನ್ನು ನಿರೀಕ್ಷಿಸಲಾಗುತ್ತಿದೆ.

   ಅಲ್ಲದೆ, ಜಿಲ್ಲಾ ಆಸ್ಪತ್ರೆಯಲ್ಲಿ ವಿವಿಧ ವಿಭಾಗದಿಂದ ಸೇವೆ ಸಲ್ಲಿಸುತ್ತಿರುವ ವೈದ್ಯರುಗಳು ಮತ್ತು ತಜ್ಞ ವೈದ್ಯರುಗಳನ್ನು ದಿನನಿತ್ಯ NMCಯ ಬಯೋಮೆಟ್ರಿಕ್ ಯಂತ್ರದಲ್ಲಿ ಹಾಜರಾತಿ ನೀಡುವಂತೆ ಸೂಚಿಸಲಾಗಿದೆ.

2. Bed Occupancy Is Inadequate: ಜಿಲ್ಲಾ ಆಸ್ಪತ್ರೆಯಲ್ಲಿ 571 ಹಾಸಿಗೆಗಳಿದ್ದು ಪ್ರತಿನಿತ್ಯ ಸರಿಸುಮಾರು 1000-1200 ಹೊರರೋಗಿಗಳ ಸೇವೆ ಸಲ್ಲಿಸಲಾಗುತ್ತಿದೆ. ಒಳರೋಗಿಗಳ ಸಂಖ್ಯೆ ನಿಗದಿತ ಹಾಸಿಗೆಗಳಿಂತ ಹೆಚ್ಚಿನ ಬೇಡಿಕೆಗಳಿದ್ದು, ಸರಿ ಸುಮಾರು 600 ಒಳ ರೋಗಿಗಳಿಗೆ ಆರೋಗ್ಯ ಸೇವೆಯನ್ನು ನೀಡಲಾಗುತ್ತಿದೆ. ಸದರಿ ಅಂಕಿ ಅಂಶಗಳನ್ನು ರಾಷ್ಟ್ರೀಯ ವೈದ್ಯಕೀಯ ಆಯೋಗಕ್ಕೆ (NMC) ದಿನಾಂಕ:26.06.2024 ರಂದು ಮಿಂಚಂಚೆ ಮುಖಾಂತರ ಮಾಹಿತಿ ನೀಡಿದೆ.

3. Blood Bank License Is Expired: ಜಿಲ್ಲಾ ಆಸ್ಪತ್ರೆಯ ರಕ್ತ ನಿಧಿ ಕೇಂದ್ರದ ಪರವಾನಿಗೆಯನ್ನು ನವೀಕರಿಸಿ ದಾಖಲಾತಿಗಳನ್ನು NMC ಗೆ ಸಲ್ಲಿಸಲಾಗಿದೆ.

4. Unrealistic data provided for haematology, clinical pathology, biochemistry and serology investigation as per OPD and IPD data: Free Diagnostic Services Initiative(FDSI) ಅನುಸಾರ ಪ್ರಯೋಗಾಲಯದಲ್ಲಿ ನಡೆಯುವ ಪ್ರತಿ ಒಂದು ಪರೀಕ್ಷೆಗಳ ಸಂಖ್ಯೆಗಳನ್ನು NMC ಗೆ ನೀಡಲಾಗಿತ್ತು. ಸದರಿ ವಿಷಯಕ್ಕೆ ಕುರಿತಂತೆ NMC ಗೆ ಅಂಕಿ-ಅಂಶಗಳೊಂದಿಗೆ ಸಮಂಜಸವಾಗಿ ವಿವರಿಸಲಾಗಿದೆ.

5. No Histopathology investigation has been conducted by pathology department: ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯಲ್ಲಿ ರೋಗ ವಿಧಾನ ಶಾಸ್ತ್ರದ ತಜ್ಞ ವೈದ್ಯರುಗಳ ಹಾಗೂ ವಿಷಯಕ್ಕೆ ಸಂಬಂಧಿಸಿದ ಉಪಕರಣಗಳ ಅಭಾವವಿರುವುದರಿಂದ Histopathology ಪರೀಕ್ಷೆ ಮತ್ತು ಮಾಹಿತಿಗಳನ್ನು ದಿನನಿತ್ಯದ ಆಧಾರದ ಮೇಲೆ ನೀಡುವಂತೆ ಜಿಲ್ಲಾ ಆಸ್ಪತ್ರೆಯ ಜಿಲ್ಲಾ ಶಸ್ತ್ರಚಿಕಿತ್ಸಕರ ಕಛೇರಿ ವತಿಯಿಂದ ನಿಯಾಮಾಮನುಸಾರ ವಾಸವಿ ಡಯಾಗ್ನೋಸ್ಟಿಕ್ ಲ್ಯಾಬೋರೇಟರಿ ಖಾಸಗಿ ಪ್ರಯೋಗಾಲಯಕ್ಕೆ CMCRI ನ ನೇಮಕಾತಿ ಪ್ರಕ್ರಿಯೆ ಹಾಗೂ ಪ್ರಯೋಗಾಲಯದ ಸೃಜನೆಯಾಗುವವರೆಗೂ ಒಪ್ಪಂದ ಮಾಡಿಕೊಳ್ಳಲಾಗಿದೆ. ಸದರಿ ಮಾಹಿತಿಯನ್ನು NMC ಗೆ ನೀಡಲಾಗಿದೆ.

6. X-RAY CT SCAN has been conducted and low rate than expected but X-RAY services are much deficient and MRI data is highly unrealistic: ಜಿಲ್ಲಾ ಆಸ್ಪತ್ರೆಯಲ್ಲಿ ಈವರೆಗೂ MLC(Medico legal Cases ) ಕುರಿತಾದ X-Ray ಮತ್ತು CT-SCAN ಗಳನ್ನು ಮಾತ್ರ ದಾಖಲಾಗಿಸಲಾಗಿತ್ತು. NMC ಯ ಈ ಸೂಚನೆ ಮೇರೆಗೆ ಜೂನ್ 2024ರಿಂದ ಆಸ್ಪತ್ರೆಯಲ್ಲಿ ವಿಭಾಗವಾರು ಸೂಚಿಸಿರುವ ಎಲ್ಲಾ ರೋಗಿಗಳ X-Ray ಮತ್ತು CT-SCANಗಳ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಮುಂದುವರೆದು, ಜಿಲ್ಲಾ ಆಸ್ಪತೆಯಲ್ಲಿರುವ MRI SCAN ಪರೀಕ್ಷೆಗಾಗಿ ಚಿತ್ರದುರ್ಗ ಜಿಲ್ಲೆಯನ್ನು ಹೊರತುಪಡಿಸಿ ಅಂಗ ಜಿಲ್ಲೆಗಳಾದ ತುಮಕೂರು, ಶಿವಮೊಗ್ಗ, ದಾವಣಗೆರೆ, ಹಾಗೂ ಬಳ್ಳಾರಿ ಜಿಲ್ಲೆಗಳಿಂದ ರೋಗಿಗಳು ಸೇವೆ ಪಡೆಯುತ್ತಿರುವುದರಿಂದ MRI ಅಂಕಿ-ಅಂಶಗಳು ಹೆಚ್ಚಾಗಿರುವುದನ್ನು NMC ಗೆ ಸ್ಪಷ್ಟೀಕರಿಸಿದೆ.

7. Faculty Declaration Form Not Provided: ಹಾಲಿ CMCRI ಮತ್ತು ಜಿಲ್ಲಾ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು ಮತ್ತು ತಜ್ಞವೈದ್ಯರುಗಳನ್ನು ಅವರವರ ವಿದ್ಯಾರ್ಹತೆ ಮೇರೆಗೆ Tutor/demonstrator/SR/assistant/Associate professor/professor ಗಳನ್ನಾಗಿ ಗುರುತಿಸಿ Declaration form ಕ್ರೂಢೀಕರಿಸಿ ದಿನಾಂಕ:06.04.2024 ರಂದು NMC ಗೆ ಮಿಂಚಂಚೆ ಮುಖಾಂತರ ಖಾತರಿಪಡಿಸಿದೆ.